## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಲಬುರಗಿ ವಿಮಾನ ನಿಲ್ದಾಣ ನಿರ್ಮಾಣದ ಬಾಕಿ ಉಳಿದ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಮೂಅಇ 101 ರಾಅವಿ 2014, ದಿನಾಂಕ: 27.04.2016.
2. ಸರ್ಕಾರದ ಆದೇಶ ಸಂಖ್ಯೆ: ಮೂಅಇ 101 ರಾಅವಿ 2014, ದಿನಾಂಕ: 03.11.2016.
3. ಜಿಲ್ಲಾಧಿಕಾರಿ, ಕಲಬುರಗಿ ಇವರ ಪತ್ರ ಸಂಖ್ಯೆ:ಸಂ/ಕಂ/ಜಿಅಕ/ಭೂಸ್ವಾ / 429/2008-09, ದಿನಾಂಕ:26.11.2016.
4. ಸರ್ಕಾರದ ಆದೇಶ ಸಂಖ್ಯೆ: ಮೂಅಇ 101 ರಾಅವಿ 2015, ದಿನಾಂಕ:18.07.2017.
5. ಸರ್ಕಾರದ ಆದೇಶ ಸಂಖ್ಯೆ: ಮೂಅಇ 101 ರಾಅವಿ 2015, ದಿನಾಂಕ:14.09.2017.
6. ಸರ್ಕಾರದ ಆದೇಶ ಸಂಖ್ಯೆ: ಮೂಅಇ 101 ರಾಅವಿ 2015, ದಿನಾಂಕ:17.10.2017.
7. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 78 ಬಿಆರ್‌ಎಸ್ 2017, ದಿನಾಂಕ:15.11.2017.
8. ಸರ್ಕಾರದ ಆದೇಶ ಸಂಖ್ಯೆಮೂಅಇ 101 ರಾಅವಿ 2015, ದಿನಾಂಕ:22.11.2017.
9. ಸರ್ಕಾರದ ಆದೇಶ ಸಂಖ್ಯೆಮೂಅಇ 101 ರಾಅವಿ 2015, ದಿನಾಂಕ:27.12.2017.
10. ಸರ್ಕಾರದ ಆದೇಶ ಸಂಖ್ಯೆಮೂಅಇ 101 ರಾಅವಿ 2015, ದಿನಾಂಕ:20.03.2018
11. ಸರ್ಕಾರದ ಆದೇಶ ಸಂಖ್ಯೆಮೂಅಇ 101 ರಾಅವಿ 2015, ದಿನಾಂಕ:23.03.2018.
12. ಜಿಲ್ಲಾಧಿಕಾರಿ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಜಿಅಕ/ಭೂಸ್ವಾ/ 429/2008-09/319, ದಿನಾಂಕ:03.04.2018.
13. ಸರ್ಕಾರದ ಆದೇಶ ಸಂಖ್ಯೆಮೂಅಇ 101 ರಾಅವಿ 2015, ದಿನಾಂಕ:04.05.2018.
14. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಪತ್ರ ಸಂಖ್ಯೆ:ಲೋಇ 159 ಸಿಎನ್‌ಹೆಚ್ 2018, ದಿನಾಂಕ:16.05.2018.
15. ಸರ್ಕಾರಿ ಆದೇಶ ಸಂಖ್ಯೆ:ಮೂಅಇ 101 ರಾಅವಿ 2015, ದಿನಾಂಕ:06.07.2018.
16. ಸರ್ಕಾರಿ ಆದೇಶ ಸಂಖ್ಯೆ:ಮೂಅಇ 101 ರಾಅವಿ 2015, ದಿನಾಂಕ:06.08.2018.
17. ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಲಬುರಗಿ ಇವರ ಪತ್ರ ಸಂಖ್ಯೆ:ಮುಇಂ(ಈ)ಕ:ಲೆಕ್ಕಾಶಾಖೆ:ಕವಿನಿ:2018-19, ದಿನಾಂಕ: 31.08.2018.
18. ಸರ್ಕಾರಿ ಆದೇಶ ಸಂಖ್ಯೆ:ಮೂಅಇ 101 ರಾಅವಿ 2015, ದಿನಾಂಕ:06.08.2018.
19. ಜಿಲ್ಲಾಧಿಕಾರಿ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಜಿಅಕ/ಭೂಸ್ವಾ/ 429/2008-09, ದಿನಾಂಕ:18.11.2018.
20. ಸರ್ಕಾರಿ ಆದೇಶ ಸಂಖ್ಯೆ:ಮೂಅಇ 101 ರಾಅವಿ 2015, ದಿನಾಂಕ:27.11.2018.
21. ಜಿಲ್ಲಾಧಿಕಾರಿ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಜಿಅಕ/ಭೂಸ್ವಾ/ 429/2008-09, ದಿನಾಂಕ:17.01.2019.
22. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 146 ಬಿಆರ್‌ಎಸ್ 2018, ದಿನಾಂಕ:14.02.2019
23. ಸರ್ಕಾರಿ ಆದೇಶ ಸಂಖ್ಯೆ:ಮೂಅಇ 101 ರಾಅವಿ 2015, ದಿನಾಂಕ:19.02.2019
24. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಐಐಡಿಸಿ, ಇವರ ಪತ್ರ ಸಂಖ್ಯೆ:ಕಾನಿ(ಪ್ರ)/ ಐಪಿಡಿ /41-4/1762/2020-21, ದಿ:17.02.2021
25. ಲೋಕೋಪಯೋಗಿ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಲೋಇ 79 ಆರ್ ಡಿ ಎಫ್ 2020, ದಿನಾಂಕ:12.10.2021
26. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:08.11.2021 ರಂದು ನಡೆದ ಸಭೆಯ ನಡವಳಿ
27. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಐಐಡಿಸಿ, ಇವರ ಪತ್ರ ಸಂಖ್ಯೆ:ಐಪಿಡಿ /41-4/1295/2020 - 21, ದಿ:16.11.2021

ಪ್ರಸ್ತಾವನೆ:

ಮೇಲಿನ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣದ ರನ್‌ವೇಯನ್ನು ಎ-320 ಮಾದರಿಯ ವಿಮಾನಗಳ ಹಾರಾಟಕ್ಕೆ ಅನುಕೂಲವಾಗುವಂತೆ ನಿರ್ಮಿಸಿ ವಿಮಾನ ನಿಲ್ದಾಣವನ್ನು ಪೂರ್ಣಗೊಳಿಸಲು ಮೆ||ರೈಟ್ಸ್ ಸಂಸ್ಥೆಯವರು ರವರು ಮೂರು ಹಂತಗಳಲ್ಲಿ ಅಂದಾಜಿಸಿರುವ ಒಟ್ಟು ವೆಚ್ಚ ರೂ.109,47,85,149/- ಗಳಿಗೆ (ನೂರ ಒಂಬತ್ತು ಕೋಟಿ ನಲವತ್ತೇಳು ಲಕ್ಷದ

ಎಂಬತ್ತೈದು ಸಾವಿರದ ನೂರ ನಲವತ್ತೊಂಬತ್ತು ಮಾತ್ರ) ಆಡಳಿತಾತ್ಮಕ ಅನುಮೋದನೆಯೊಂದಿಗೆ ಈ ಯೋಜನೆಯ ಒಟ್ಟಾರೆ ವೆಚ್ಚದ ಮೂರನೇ ಒಂದು ಭಾಗವನ್ನು (1/3) ಹೈದ್ರಾಬಾದ್ – ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಿಂದ ಭರಿಸಲು ಹಾಗೂ ಉಳಿದ ಅನುದಾನವನ್ನು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ಭರಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿರುತ್ತದೆ.

2. ಮೇಲಿನ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ Package-I ಕಾಮಗಾರಿಗೆ ಗುತ್ತಿಗೆದಾರರಿಗೆ ಮುಂಗಡ ಹಣವಾಗಿ Mobilisation Advance(5% of the contractor price on submission of unconditional bank guarantee of the same amount) ಮತ್ತು M/s RITES Limited ರವರಿಂದ ಕೈಗೊಂಡಿರುವ ಟೋಪೋಗ್ರಾಫಿಕಲ್ ಸರ್ವೆ ಮತ್ತು ಒಜಿಎಲ್ ಸ್ಟಡಿ ಕಾಮಗಾರಿಗಳನ್ನು ಸೇರಿಸಿ ಒಟ್ಟು ರೂ.4,36,24,055/- (ನಾಲ್ಕು ಕೋಟಿ ಮೂವತ್ತಾರು ಲಕ್ಷದ ಇಪ್ಪತ್ನಾಲ್ಕು ಸಾವಿರದ ಐವತ್ತೈದು ರೂಪಾಯಿಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

3. ಮೇಲಿನ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರು ಕಾಮಗಾರಿಗಳು ಭೌತಿಕ ಪ್ರಗತಿಯಲ್ಲಿರುವ ಪ್ರಯುಕ್ತ ಸದರಿ ಕಾಮಗಾರಿಯನ್ನು ನಿರ್ವಹಿಸಲು ರೂ.20.00 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದು, ಅದರಂತೆ ಪರಿಶೀಲಿಸಿ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಆದೇಶದಲ್ಲಿ ರೂ.3.26 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

4. ಮೇಲಿನ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣ ನಿರ್ಮಾಣದ ಬಾಕಿ ಕಾಮಗಾರಿಗಳಿಗೆ ಅಗತ್ಯ ಅನುದಾನವನ್ನು ದಿನಾಂಕ:30.09.2017ರ ತ್ರೈಮಾಸಿಕ ಅಂತ್ಯಕ್ಕೆ ಲಭ್ಯವಾಗುವ ಮೊತ್ತ ರೂ.2.81 ಕೋಟಿಗಳನ್ನು ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

5. ಮೇಲಿನ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣ ನಿರ್ಮಾಣದ ಬಾಕಿ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನ ರೂ. 6.53 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

6. ಮೇಲಿನ ಕ್ರಮ ಸಂಖ್ಯೆ (7) ರಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಕಾಮಗಾರಿಗಳಿಗೆ ಅನುದಾನ ಅಗತ್ಯವಿದ್ದು, ಲೆಕ್ಕ ಶೀರ್ಷಿಕೆ 5465-01-190-1-05-211- ಬಂಡವಾಳ ಹೂಡಿಕೆ ಅಡಿಯಲ್ಲಿ ಅನುದಾನ ಕೊರತೆ ಇದ್ದುದರಿಂದ ರೂ.500.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 5465-01-190-1-05-14 ಭೂ ಸ್ವಾಧೀನ ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ರೂ.500.00 ಲಕ್ಷಗಳು ಪುನರ್ವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಲಾಗಿದೆ. ಮೇಲಿನ ಕ್ರಮ ಸಂಖ್ಯೆ (8) ರಲ್ಲಿ ಓದಲಾದ ಆದೇಶದಲ್ಲಿ "5465-01-190-1-05-145" ಭೂ ಸ್ವಾಧೀನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಲಭ್ಯವಿರುವ ಅನುದಾನದಿಂದ ರೂ.5,00,00,000/- ಗಳನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

7. ಮೇಲಿನ ಕ್ರಮ ಸಂಖ್ಯೆ (9)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಈಗಾಗಲೇ ರೂ.10.00 ಕೋಟಿ ಅನುದಾನವನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

8. ಮೇಲಿನ ಕ್ರಮ ಸಂಖ್ಯೆ (10) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಬಾಕಿ ಉಳಿದ ಕಾಮಗಾರಿಗೆ ರೂ.175.57 ಕೋಟಿಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆಯನ್ನು ನೀಡಲಾಗಿರುತ್ತದೆ.

9. ಮೇಲಿನ ಕ್ರಮ ಸಂಖ್ಯೆ(11) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2017-18 ನೇ ಸಾಲಿನ ಲೆಕ್ಕಶೀರ್ಷಿಕೆ -5465-01-190-1-05-211-ಬಂಡವಾಳ ಹೂಡಿಕೆ ಅಡಿಯಲ್ಲಿ ರೂ.1879.00 ಲಕ್ಷಗಳನ್ನು ಪುನರ್ವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಿ, ಕಲಬುರಗಿ ವಿಮಾನ ನಿಲ್ದಾಣದ

ಪ್ಯಾಕೇಜ್ - 1 ಮತ್ತು ಪ್ಯಾಕೇಜ್-2 ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನ ರೂ.17,79,00,000/- ಗಳನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿದೆ.

10. ಮೇಲಿನ ಕ್ರಮ ಸಂಖ್ಯೆ (12) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರ ಪ್ರಸ್ತಾವನೆಯಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಬಾಕಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು ರೂ. 51.56 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದು, ಮೇಲಿನ ಕ್ರಮ ಸಂಖ್ಯೆ (13) ರಲ್ಲಿ ಓದಲಾದ ಆದೇಶದಲ್ಲಿ ರೂ.8.00 ಕೋಟಿ ಅನುದಾನವನ್ನು ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

11. ಮೇಲಿನ ಕ್ರಮ ಸಂಖ್ಯೆ (14) ರಲ್ಲಿ ಓದಲಾದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಪ್ರಸ್ತಾವನೆಯಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಬಾಕಿ ಕಾಮಗಾರಿಗಳಿಗೆ ಅಗತ್ಯವಾದ ರೂ. 63.58 ಕೋಟಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಮುಖ್ಯ ಅಭಿಯಂತರರು, ಸಂಪರ್ಕ ಮತ್ತ ಕಟ್ಟಡ (ಈಶಾನ್ಯ) ಕಲಬುರಗಿ ಇವರು ಕೋರಿರುತ್ತಾರೆ.

12. ಮೇಲಿನ ಕ್ರಮ ಸಂಖ್ಯೆ (15) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಪ್ಯಾಕೇಜ್-1, ಪ್ಯಾಕೇಜ್-2 ಮತ್ತು ಪ್ಯಾಕೇಜ್-3 ರ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನ ರೂ.7,33,22,000/- ಗಳನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

13. ಮೇಲಿನ ಕ್ರಮ ಸಂಖ್ಯೆ (16) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಪ್ಯಾಕೇಜ್ 1, 2 & 3 ರ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಅನುದಾನ ರೂ. 8,00,00,000 ಗಳನ್ನು ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

14. ಮೇಲಿನ ಕ್ರಮ ಸಂಖ್ಯೆ (17) ರಲ್ಲಿ ಓದಲಾದ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಪ್ರಸ್ತಾವನೆಯಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಪ್ಯಾಕೇಜ್ 1 & 2 ರ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಅನುದಾನ ರೂ.14,80,00,000/-ಗಳು ಹಾಗೂ ಕಲಬುರಗಿ ವಿಮಾನ ನಿಲ್ದಾಣಕ್ಕೆ ನೀರು ಸರಬರಾಜು ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಿಂದ ಕೈಗೊಳ್ಳಲಾಗುತ್ತಿರುವುದರಿಂದ ಮಂಡಳಿ ನಿಯಮಾವಳಿಯಂತೆ ಕಾಮಗಾರಿಯ ಹಣವನ್ನು ಠೇವಣಿ ಮಾಡಿದ್ದಲ್ಲಿ ಮಾತ್ರ ಕಾಮಗಾರಿ ಕೈಗೊಳ್ಳಬಹುದೆಂದು ತಿಳಿಸಿರುವ ಹಿನ್ನಲೆಯಲ್ಲಿ ಠೇವಣಿ ಮಾಡಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ಇವರಿಗೆ ರೂ.3,43,00,000/- ಒಟ್ಟು ರೂ.18,23,00,000/- ಗಳನ್ನು ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಕಲಬುರಗಿ ಜಿಲ್ಲೆ, ಕಲಬುರಗಿ, ಇವರಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

15. ಮೇಲಿನ ಕ್ರಮ ಸಂಖ್ಯೆ (18) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಪ್ಯಾಕೇಜ್ 1 & 2 ಕಾಮಗಾರಿಗಳಿಗಾಗಿ ಅಗತ್ಯವಿರುವ ಅನುದಾನ ರೂ.14,80,00,000/- ಹಾಗೂ ಕಲಬುರಗಿ ವಿಮಾನ ನಿಲ್ದಾಣಕ್ಕೆ ನೀರು ಸರಬರಾಜು ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಿಂದ ಕೈಗೊಳ್ಳಲಾಗುತ್ತಿರುವುದರಿಂದ ಮಂಡಳಿ ನಿಯಮಾವಳಿಯಂತೆ ಠೇವಣಿ ಮಾಡಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ಇವರಿಗೆ ರೂ.3,43,00,000/- ಒಟ್ಟಾರೆಯಾಗಿ ರೂ.18,23,00,000/- ಗಳನ್ನು ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

16. ಮೇಲಿನ ಕ್ರಮ ಸಂಖ್ಯೆ (19) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರ ಪ್ರಸ್ತಾವನೆಯಲ್ಲಿ ಕಲಬುರಗಿ ವಿಮಾನ ನಿಲ್ದಾಣದ Completion of work at Gulbarga Airport Air bus A-320 Craft for year 2015-16ರ ಕಾಮಗಾರಿಯು ಪ್ರಗತಿಯಲ್ಲಿದ್ದು, ಅಕ್ಟೋಬರ್

ಅಂತ್ಯದವರೆಗೆ ಬಿಲ್ಲುಗಳ ಪಾವತಿಗಾಗಿ ರೂ.25.10 ಕೋಟಿಗಳ ಅನುದಾನದ ಅವಶ್ಯಕತೆ ಇದ್ದು, ಸದರಿ ಹಣವನ್ನು ಬಿಡುಗಡೆಗೊಳಿಸುಂತೆ ಕೋರಿರುತ್ತಾರೆ.

17. ಮೇಲಿನ ಕ್ರಮ ಸಂಖ್ಯೆ (20) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಪ್ಯಾಕೇಜ್ 1 & 2 ಕಾಮಗಾರಿಗಳಿಗಾಗಿ ಅಗತ್ಯವಿರುವ ಅನುದಾನ ರೂ.7,11,50,000/- ಗಳನ್ನು ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಬಳಕೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

18. ಮೇಲಿನ ಕ್ರಮ ಸಂಖ್ಯೆ (21) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರ ಪ್ರಸ್ತಾವನೆಯಲ್ಲಿ ಕಲಬುರಗಿ ವಿಮಾನ ನಿಲ್ದಾಣದ Completion of work at Gulbarga Airport Air bus A-320 Craft for year 2015-16ರ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್ 2018 ರ ಅಂತ್ಯದವರೆಗೆ ಬಾಕಿ ಬಿಲ್ಲುಗಳ ಪಾವತಿಗಾಗಿ ರೂ.18.00 ಕೋಟಿಗಳ ಅನುದಾನದ ಅವಶ್ಯಕತೆ ಇದ್ದು, ಸದರಿ ಹಣವನ್ನು ಬಿಡುಗಡೆಗೊಳಿಸುಂತೆ ಕೋರಿರುತ್ತಾರೆ.

19. ಮೇಲಿನ ಕ್ರಮ ಸಂಖ್ಯೆ (22) ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ:14.02.2019 ರಲ್ಲಿ "5465-01-190-1-05-132-ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ - ಬಂಡವಾಳ ವೆಚ್ಚಗಳು" ಲೆಕ್ಕಶೀರ್ಷಿಕೆಗೆ ರೂ.10000.00 ಲಕ್ಷಗಳನ್ನು "5465-01-190-3-05-132-ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ-ಬಂಡವಾಳ ವೆಚ್ಚಗಳು" ಲೆಕ್ಕಶೀರ್ಷಿಕೆಯಿಂದ ಪುನರ್ ವಿನಿಯೋಗದ ಮೂಲಕ ಒದಗಿಸಲಾಗಿರುತ್ತದೆ.

20) ಮೇಲೆನ ಕ್ರಮ ಸಂಖ್ಯೆ (23)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕಲಬುರಗಿ ವಿಮಾನ ನಿಲ್ದಾಣದ Completion of work at Gulbarga Airport Air bus A-320 Craft for year 2015-16ರ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್ 2018 ರ ಅಂತ್ಯದವರೆಗೆ ಬಾಕಿ ಬಿಲ್ಲುಗಳ ಪಾವತಿಗಾಗಿ ರೂ.18,00,00,000/- (ಹದಿನೆಂಟು ಕೋಟಿ ರೂಪಾಯಿಗಳು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಿ ಆದೇಶಿಸಲಾಗಿದೆ.

21) ಮೇಲೆನ ಕ್ರಮ ಸಂಖ್ಯೆ (25)ರಲ್ಲಿ ಓದಲಾದ ಲೋಕೋಪಯೋಗಿ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ ಕಲಬುರಗಿ ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಯ ಆರ್ಥಿಕ ಲೆಕ್ಕಾಚಾರದ ವಿವರಗಳನ್ನು ಮುಖ್ಯ ಇಂಜಿನಿಯರ್‌ರವರು ವಿವರಿಸಿದ್ದು, ಈ ಕಾಮಗಾರಿಯ ಪರಿಷ್ಕೃತ ಮೊತ್ತದ ಮಿತಿಯಲ್ಲಿ ಭೌತಿಕವಾಗಿ ಪೂರ್ಣಗೊಂಡಿದ್ದು, ಈವರೆಗೆ ರೂ 161.64 ಕೋಟಿ ವೆಚ್ಚವಾಗಿದ್ದು, ಬಾಕಿ ಬಿಲ್ಲುಗಳು ಪಾವತಿಗಾಗಿ ರೂ 8.77 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿದಲ್ಲಿ ಈ ಕಾಮಗಾರಿಯು ಆರ್ಥಿಕವಾಗಿ ಪೂರ್ಣಗೊಳ್ಳುವುದೆಂಬ ಅಭಿಪ್ರಾಯ ನೀಡಿರುತ್ತಾರೆ.

22) ಮೇಲೆನ ಕ್ರಮ ಸಂಖ್ಯೆ (26)ರಲ್ಲಿ ಓದಲಾದ ದಿನಾಂಕ:08.11.2021ರ ಸಭೆಯ ನಡವಳಿಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ ಇವರು ಕಲಬುರಗಿ ವಿಮಾನ ನಿಲ್ದಾಣವನ್ನು ರೂ.109.48 ಕೋಟಿ ಮೊತ್ತದಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರವು ಆಡಳಿತಾತ್ಮ ಅನುಮೋದನೆಯನ್ನು ನೀಡಿದ್ದು, ನಂತರದಲ್ಲಿ ಪರಿಷ್ಕೃತ ಮೊತ್ತ ರೂ 175.57 ಕೋಟಿಗೆ ಅನುಮೋದನೆಯನ್ನು ದಿನಾಂಕ:20.03.2018ರಂದು ಸರ್ಕಾರವು ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ ಕಲಬುರಗಿ ವಿಮಾನ ನಿಲ್ದಾಣಕ್ಕೆ ಅನುಮೋದನೆಯಾದ ಪರಿಷ್ಕೃತ ಮೊತ್ತಕ್ಕೆ ಕಾಮಗಾರಿಯ ಪುನರ್ವಿನಿಯೋಗ(Reappropriation) ಮಾಡಲಾಗಿ ರೂ.170.41 ಕೋಟಿ ಆಗುತ್ತದೆ, ಸರ್ಕಾರವು ಇಲ್ಲಿಯವರೆಗೆ ರೂ.161.61 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿದ್ದು, ಬಾಕಿ ಮೊತ್ತವಾದ ರೂ.8.80 ಕೋಟಿ ಅನುದಾನದ ಅವಶ್ಯಕತೆ ಇದ್ದು, ಸದರಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ಇವರು ಕೋರಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿ, ಕೆ.ಎಸ್.ಐ.ಐ.ಡಿ.ಸಿ ಯಿಂದ ಅನುದಾನ ಬಿಡುಗಡೆಗೆ ಸಲ್ಲಿಸುವ ಪ್ರಸ್ತಾವನೆಯಲ್ಲಿ ಕೆಲವೊಂದು ಅಂಶಗಳನ್ನು ಸೇರ್ಪಡೆಗೊಳಿಸದೆ ಸರ್ಕಾರಕ್ಕೆ ಕಳುಹಿಸಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿರುವ ಹಿನ್ನಲೆಯಲ್ಲಿ ಸಭೆಯು ಕಲಬುರಗಿ ವಿಮಾನ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳ ಬಾಕಿ ಮೊತ್ತವಾದ

ರೂ 8.80 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಕೂಡಲೇ ಕ್ರಮವಹಿಸುವಂತೆ ಕೆ.ಎಸ್.ಐ.ಐ.ಡಿ ನಿಗಮಕ್ಕೆ ನಿರ್ದೇಶನವನ್ನು ನೀಡಿರುತ್ತಾರೆ.

23) ಮೇಲಿನ ಕ್ರಮ ಸಂಖ್ಯೆ (27)ರಲ್ಲಿ ಓದಲಾದ ವ್ಯವಸ್ಥಾಪಕ ನಿರ್ದೇಶಕರ ಪ್ರಸ್ತಾವನೆಯಲ್ಲಿ, ದಿನಾಂಕ:08.11.2021ರಂದು ನಡೆದ ಸಭೆಯಲ್ಲಿ ನಡವಳಿಯಂತೆ ಕಲಬುರಗಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ರೂ 161.61 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದ್ದು, ಬಾಕಿ ಉಳಿದ ಮೊತ್ತವಾದ ರೂ 8.80 ಕೋಟಿ ಮೊತ್ತ ಬಿಡುಗಡೆ ಮಾಡಬೇಕಾಗಿರುತ್ತೆಂದು ಲೋಕೋಪಯೋಗಿ ಇಲಾಖೆಯು ತಿಳಿಸಿರುವುದರಿಂದ ಸದರಿ ಮೊತ್ತವನ್ನು ಲೋಕೊಪಯೋಗಿ ಇಲಾಖೆಗೆ ಬಿಡುಗಡೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ

19. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ. ಮೂಅಇ 105 ರಾಅವಿ 2019,**
**ಬೆಂಗಳೂರು, ದಿನಾಂಕ:29.11.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳ ಬಾಕಿ ಮೊತ್ತ ರೂ 8,80,00,000/- (ಎಂಟು ಕೋಟಿ ಎಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2. ಈ ಮೊತ್ತವನ್ನು 2021-22ನೇ ಸಾಲಿನ ಲೆಕ್ಕಶೀರ್ಷಿಕೆ "5465-01-190-1-05-132--ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ - ಬಂಡವಾಳ ವೆಚ್ಚಗಳು" ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

3. ಈ ಅನುದಾನವನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರ ಖಾತೆಗೆ ಖಜಾನೆ-2 ರಲ್ಲಿ ಅಪ್‌ಲೋಡ್ ಮಾಡುವುದು. ಈ ಹಣವನ್ನು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ಇವರಿಗೆ ಜಮಾ ಮಾಡಿ ಸ್ವೀಕೃತಿ ಪಡೆಯತಕ್ಕದ್ದು ಹಾಗೂ ಬಿಡುಗಡೆಯಾದ ಅನುದಾನದ ಉಪಯೋಗಿತ ಪ್ರಮಾಣ ಪತ್ರವನ್ನು ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯ ಛಾಯಾ ಚಿತ್ರಗಳೊಂದಿಗೆ ಪಡೆದು ಸರ್ಕಾರಕ್ಕೆ ಸಲ್ಲಿಸುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ:05.04.2021 ಹಾಗೂ ಅಪರ ಮುಖ್ಯಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯರವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Kala

(ಎಸ್.ಎನ್.ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು
ಮತ್ತು ಒಳನಾಡು ಜಲಸಾರಿಗೆ ಇಲಾಖೆ.

**ಪ್ರತಿ:-**

1. ಪ್ರಧಾನ ಮಹಾಲೇಖಪಾಲರು (ಆಡಿಟ್ –1, 2, 3/ A & E), ಪ್ರಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎ.ಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು –01.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ, ವಿಕಾಸಸೌಧ, ಬೆಂಗಳೂರು.

3. ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.
4. ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ.
5. ಕಾರ್ಯದರ್ಶಿ, ಹೈದ್ರಾಬಾದ್ – ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ.
6. ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವೃತ್ತ ಕಲಬುರಗಿ.
7. ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವೃತ್ತ ಕಲಬುರಗಿ.
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ-ವಿಭಾಗ, ಕಲಬುರಗಿ.
9. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
10. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು.
11. ನಿರ್ದೇಶಕರು, PM & I ವಿಭಾಗ, ಯೋಜನಾ ಇಲಾಖೆ.
12. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು,
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1).

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
2. ಸರ್ಕಾರದ ಅಪರ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು(ವಿಮಾನ ನಿಲ್ದಾಣ ಮತ್ತು ಸಮನ್ವಯ), ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
3. ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು
4. ಸರ್ಕಾರದ ಅಧೀನ ಕಾರ್ಯದರ್ಶಿ-2, ಸಮನ್ವಯ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಇವರ ಮಾಹಿತಿಗಾಗಿ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.